ಆಗಬಹುದಾದ ಯಾವುದೇ ಕೆಲಸವನ್ನು ಮಾಡಿಸಿಕೊಡುವ ಸಮಾಜಸೇವೆ ಮಾಡುತ್ತಿದ್ದರೆ, ಇತ್ತ ದಲ್ಲಾಳಿಗಳ ಅಧ್ಯಯನಕ್ಕೆ ಬೇಕಾದ ಏರ್ಪಾಟು ಮಾಡಬಲ್ಲ ದಲ್ಲಾಳಿಗಳೂ ಇದ್ದಾರೆ!

ಮುಂಬೈನ ಡಬ್ಬಾವಾಲಾಗಳ ಕಥೆ ಕೇಳದಿರುವವರು ವಿರಳ. ಮುಂಬೈನ ಹೊರವಲಯದಿಂದ ಟಿಫಿನ್ ಕ್ಯಾರಿಯರನ್ನು ನಗರದ ಒಳವಲಯಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ದಿನವೂ ನಿಖರವಾಗಿ ಒಯ್ಯುವ ಜಾಲದ ವ್ಯವಸ್ಥೆಯ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಲೇಖನಗಳು ಬಂದಿರುವುದಲ್ಲದೇ, ನಿಖರತೆ ತಪ್ಪಿ ಆ ಊಟ ಬೇರೊಬ್ಬರಿಗೆ ತಲುಪಿದಾಗ ಆಗಬಹುದಾದ ಸಾಧ್ಯತೆಗಳನ್ನು ಪರಿಶೀಲಿಸುವ 'ಲಂಚ್ ಬಾಕ್ಸ್' ಸಿನಿಮಾ ಕೂಡಾ ತಯಾರಾಗಿದೆ. ಡಬ್ಬಾವಾಲಾರ ಖ್ಯಾತಿಯಿಂದಾಗಿ ಅವರ ಜಾಲದ ಅಧ್ಯಯನಗಳೂ ಪ್ರಾರಂಭವಾಗಿದ್ದು ಆ ಅಧ್ಯಯನವನ್ನು ಅನುವುಮಾಡಿಕೊಡಲು, ಡಬ್ಬಾವಾಲಾರನ್ನು ಪರಿಚಯಿಸಲು, ಅವರೊಂದಿಗೆ ಪ್ರಯಾಣ ಮಾಡಿ ಅವರ ಕಥೆಗಳನ್ನು ದಾಖಲಿಸಲೂ ಸಹಾಯ ಮಾಡಲು ತಯಾರಾಗಿರುವ 'ಶರವಣ'ಸೇವೆಗಳನ್ನು ಈ ಪುಸ್ತಕದಲ್ಲಿ ದಾಖಲು ಮಾಡಿದ್ದಾರೆ.

ಡಬ್ಬಾವಾಲಾಗಳ ಬಗೆಗಿನ ಅಧ್ಯಯನ ಮಾಡಲು ಇದು ವಿಶೇಷ ಸೇವೆಯಾದರೆ, ಮುಂಬೈನ ಬಗ್ಗೆ ವಿವಿಧ ರೀತಿಯ ಅಧ್ಯಯನಗಳನ್ನು ಮಾಡಲು ಅನುವು ಮಾಡಿಕೊಡುವ ಮಾಹಿತಿ ಸಂಗ್ರಹಣಾ ಸಂಸ್ಥೆ, ಸರ್ಕಾರದ ಯೋಜನೆಗಳಿಗೆ ಬೇಕಾದ ವರದಿಗಳನ್ನು ತಯಾರು ಮಾಡುವಲ್ಲಿ ಪರಿಣತಿ ಪಡೆದ ರಿಪೋರ್ಟ್ ತಯಾರಕ ಚಡ್ಡಾ, ಕಾಮಾಟಿಪುರದಲ್ಲಿನ ಲೈಂಗಿಕ ವ್ಯಾಪಾರದಲ್ಲಿ ತೊಡಗಿರುವ ಹುಡುಗಿಯರನ್ನು ಅಧ್ಯಯನಕ್ಕೆ ಪರಿಚಯಿಸಿಕೊಡುವ ನಿರ್ಮಲಾ – ಹೀಗೆ ನಾವು ಊಹಿಸಲಾಗದ ಕಾಯಕಗಳು ಈ ಪುಸ್ತಕದಲ್ಲಿ ತೆರೆದುಕೊಳ್ಳುತ್ತವೆ.

ಪವನ್ ಎನ್ನುವ ವ್ಯಕ್ತಿಯ ಕಥೆ ಗಮ್ಮತ್ತಿನದ್ದು. ಒಂದು ಘಟನೆಯಲ್ಲಿ ನಡೆದ ತಪ್ಪು ಪರಿಕಲ್ಪನೆಯಿಂದಾಗಿ ಅವನು ಜೈಲಿಗೆ ಹೋಗುತ್ತಾನೆ. ಅಲ್ಲಿ ಪವನ್ ತನ್ನಲ್ಲಿರುವ ನಟನೆ ಮತ್ತು ಮಿಮಿಕ್ರಿಯ ಕೌಶಲ್ಯವನ್ನು ಉಪಯೋಗಿಸಿ ಇತರ ಕೈದಿಗಳಿಗೆ ಮನರಂಜನೆಯನ್ನು ಒದಗಿಸಿ, ಜೈಲು ಅಧಿಕಾರಿಗಳ ಸ್ನೇಹವನ್ನು ಬೆಳೆಸಿಕೊಳ್ಳುತ್ತಾನೆ. ಅವನ ಹೆಸರು ಶಂಕಿತ ಅಪರಾಧಿಗಳ ಪಟ್ಟಿಯಲ್ಲಿ ಸೇರುವುದರಿಂದಾಗಿ ಏನೇ ಗಲಾಟೆಯಾದರೂ ಬಂಧಿಸಿ ಜೈಲಿಗೆ ಹಾಕುವುದು, ಕೆಲದಿನಗಳಲ್ಲಿ ಬಿಡುಗಡೆಯಾಗುವುದೂ ಒಂದು ಪರಿಪಾಠವಾಗುತ್ತದೆ. ಕಾಲಾಂತರದಲ್ಲಿ ಜೈಲಿನ ಜೀವನ, ಅಲ್ಲಿನ ವಿಧಿವಿಧಾನಗಳನ್ನು ನಿಭಾಯಿಸುವ ಪರಿಯನ್ನು ಕಂಡುಕೊಂಡ ಪವನ್‌ಗೆ ಹೊಸ ಕಾಯಕವೊಂದು ರೂಪುಗೊಳ್ಳುತ್ತದೆ. ಹಣವಂತರಿಗೆ ಜೈಲಾದಾಗ, ಅವರ ಪರವಾಗಿ ಪವನ್ ಕಾರಾವಾಸವನ್ನು ಅನುಭವಿಸಿ ಅದನ್ನೇ ತನ್ನ ಕಾಯಕವನ್ನಾಗಿಸಿಕೊಳ್ಳುತ್ತಾನೆ. ಅವನು ಬದುಕಿರುವ ಕೊಳೆಗೇರಿಯಲ್ಲಿ ಮಳೆಗಾಲದಲ್ಲಿರುವ ದುರ್ಗಮ ಪರಿಸ್ಥಿತಿಯನ್ನು ಮೀರಲೂ ಜೈಲು ಒಂದು ಸಾಧನವಾಗುತ್ತದೆ. ಜೈಲಿನವಾಸ ಸರಳವಾದದ್ದೇನೂ ಅಲ್ಲ. ಅಲ್ಲಿನ ಚಹಾಕ್ಕೆ ಬೆರೆಸುವ ಹಾಲಿನಲ್ಲಿ ಶೌಚಾಲಯದಿಂದ ಹಿಡಿದ ನೀರು ಬೆರೆಸುವುದರಿಂದ ಹೊಟ್ಟೆ ಕೆಡುತ್ತದೆ. ಆದರೆ, ಇದೇ ಕಾಯಕವಾದಾಗ ಅದನ್ನು ನಿಭಾಯಿಸುವ ಮಾರ್ಗಗಳೂ ಕಂಡುಬರುತ್ತವೆ. ಆ ಕೆಲಸ ಬೆಳೆಯುತ್ತಿದ್ದಂತೆ ಇದೇ ಕೆಲಸಕ್ಕಾಗಿ ತಾನಲ್ಲದೇ ಇಬ್ಬರು ಹುಡುಗರನ್ನೂ ನೇಮಿಸಿಕೊಳ್ಳುತ್ತಾನೆ. ಆ ಹುಡುಗರ ಮೇಲೆ ಜೈಲಿನ ಅಧಿಕಾರಿಗಳು ಎಸಗಿದ ಕ್ರೌರ್ಯವನ್ನು ಕಂಡನಂತರ ಬೇರೆಯವರನ್ನು ನೇಮಿಸುವುದನ್ನು ಬಿಟ್ಟುಕೊಡುತ್ತಾನಾಗಲೀ, ಈ ವ್ಯಾಪಾರ ವಿಸ್ತೃತವಾಗಬಹುದಾದ ಸಾಧ್ಯತೆಗಳನ್ನು ಈ ಉಪಕತೆ ತೋರಿಸುತ್ತದೆ.

ಮಧ್ಯವರ್ತಿ, ದಲ್ಲಾಳಿ, ಬ್ರೋಕರ್, ತಲೆಹಿಡುಕ – ಹೀಗೆ ಬೇರೆ ಬೇರೆ ಹೆಸರಿನಿಂದ ನಾವು ಈ ಸೇವೆಗಳನ್ನು ಒದಗಿಸುವವರನ್ನು ಕರೆಯಬಹುದು. ಅವರ ಸೇವೆಗಳನ್ನು ಬ್ರೋಕರೇಜ್, ಫೆಸಿಲಿಟೇಷನ್, ಪ್ಲಾನರ್, ಅರೇಂಜ್‌ಮೆಂಟ್ ಎಂದು ಹೆಸರಿಸಬಹುದು. ಇವುಗಳಲ್ಲಿ ಯಾವ ಸೇವೆಗಳು ಕಾನೂನು